CC No.249/2024

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 249/2024 |
| ಸಿ.ಡಬ್ಲ್ಯೂ | : 04 |
| ಪಿ.ಡಬ್ಲ್ಯೂ | : 05 |
| ಸಾಕ್ಷಿಯ ಹೆಸರು | : ಶಂಭುಲಿಂಗಯ್ಯ ಅಂದಾನಯ್ಯ ಹಿರೇಹಾಳ |
| ವಯಸ್ಸು | : 59 ವರ್ಷ |
| ಉದ್ಯೋಗ | : ಎ ಎಸ್ ಐ, ಧಾರವಾಡ ಡಿ ಸಿ ಆರ್ ಬಿ ಪೋಲೀಸ ಠಾಣೆ. |
| ವಾಸ ಸ್ಥಳ | : ಧಾರವಾಡ |

ದಿನಾಂಕಃ 11/09/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನಾನು 2019 ರಿಂದ 2022 ರವರೆಗೆ ಎಚ್ ಸಿ ಎಂದು ನವಲಗುಂದ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 02-12-2021 ರಂದು ನಾನು, ಚಾಸಾ-1 ಹಾಗೂ ಸಿಬ್ಬಂದಿ ಠಾಣೆಯಲ್ಲಿದ್ದಾಗ ಮ.12.15 ಗಂಟೆಗೆ ಶಲವಡಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವಾಗಿ ಬಗ್ಗೆ ಗೊತ್ತಾಗಿದ್ದು ಆಗ ನಾನು ಚಾಸಾ-2 ಮತ್ತು 3 ರವರನ್ನು ಕರೆಯಿಸಿ ಮ.12.30 ಕ್ಕೆ ಠಾಣೆಯಿಂದ ಹೊರಟು ಮ.12.50 ಗಂಟೆಗೆ ಘಟನಾ ಸ್ಥಳ ತಲುಪಿ ವೀಕ್ಷಣೆ ಮಾಡುತ್ತಿದ್ದಾಗ ಆರೋಪಿ ಘಟನಾ ಸ್ಥಳದಲ್ಲಿ ಅನಧಿಕೃತವಾಗಿ ಮಧ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಸದರಿಯವನು ಮದ್ಯ ಮಾರಾಟ ಮಾಡಲು ಯಾವದೇ ಪರವಾನಿಗೆ ಇಲ್ಲಾ ಎಂದು ತಿಳಿಸಿರುತ್ತಾನೆ. ಸದರಿಯವನನ್ನು ವಿಚಾರಿಸಿದಾಗ ಆರೋಪಿ ತನ್ನ ಹೆಸರನ್ನು ಮಹಾಂತೇಶ

ಚೆನ್ನಬಸಪ್ಪ ಹಳ್ಳಿ ಎಂದು ತಿಳಿಸಿದ್ದು, ಆತನ ತಾಬಾದಿಂದ 90 ML ನ 35 ಓರಿಜಿನಲ್ ಚಾಯಿಸ್ ವಿಸ್ಕಿ ಪೌಚಗಳು ಹಾಗೂ 1 ಚೀಲ ಜಪ್ತಿಪಡಿಸಿಕೊಂಡು ಅವುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಜಪ್ತಿಪಡಿಸಿಕೊಂಡು ಪಂಚನಾಮೆ ಮ.01.00 ರಿಂದ 02.00 ವರೆಗೆ ಚಾಸಾ-1 ರವರು ಪೂರೈಸಿರುತ್ತಾರೆ. ನನ್ನ ಹೇಳಿಕೆಯನ್ನು ಚಾಸಾ-8 ರವರಿಗೆ ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ ಹಾಗೂ ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಂ ಎಸ್ ಎಚ್ ವಕೀಲರಿಂದ**

ಠಾಣೆಯಿಂದ ಘಟನಾ ಸ್ಥಳ 11-12 ಕಿ.ಮೀ. ಅಂತರದಲ್ಲಿದೆ. ಸದರಿ ಅಂತರ ತಲುಪಲು 20 ನಿಮಿಷ ಅವಧಿ ಬೇಕಾಗುತ್ತದೆ ಎಂದರೆ ಸರಿ. ಚಾಸಾ-2 ಮತ್ತು 3 ರವರನ್ನು ನಾನೇ ಕರೆಸಿರುತ್ತೇನೆ. ಚಾಸಾ-1 ರವರು ಪಂಚರಿಗೆ ಯಾವುದೇ ನೋಟಿಸ ಕೊಟ್ಟಿರಲಿಲ್ಲ. ನಮ್ಮ ವಾಹನವನ್ನು 100 ಮೀಟರ ಅಂತರದಲ್ಲಿ ನಿಲ್ಲಿಸಿರುತ್ತೇವೆ. ವಾಹನವನ್ನು ಯಾವ ಬದಿಗೆ ನಿಲ್ಲಿಸಿ ವಿಕ್ಷಣೆ ಮಾಡಿರುತ್ತೇವೆ ನನಗೆ ನೆನಪಿಲ್ಲ. ಘಟನಾ ಸ್ಥಳದಲ್ಲಿ ಅಂದಾಜು 5-10 ನಿಮಿಷಗಳ ಕಾಲ ವಿಕ್ಷಣೆ ಮಾಡಿರುತ್ತೆವೆ. ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಬರೆದಿದ್ದು ಅವರ ಸಹಿಯನ್ನು ತೆಗೆದುಕೊಂಡಿರುವದಿಲ್ಲ. ಘಟನಾ ಸ್ಥಳದ ಸುತ್ತಮುತ್ತ ಸಾಕಷ್ಟು ಮನೆಗಳಿರುತ್ತವೆ ಎಂದರೆ ಸರಿ. ಜಪ್ತಿ ಮಾಡಿದ ಎಲ್ಲಾ ಮುದ್ದೆ ಮಾಲನ್ನು ರಸಾಯನಿಕ ಪರೀಕ್ಷೆಗೆ ಕಳುಹಿಸಿರುವದಿಲ್ಲ. ಜಪ್ತಿ ಮಾಡಿದ ಮುದ್ದೆ ಮಾಲಿನ ವಿವರಗಳನ್ನು ಆರೋಪಿತರಿಗೆ ನೀಡಿರುವುದಿಲ್ಲ. ಮುದ್ದೆ ಮಾಲಿನಂತಹ ವಸ್ತುಗಳು ಸಾಮಾನ್ಯವಾಗಿ ಬೇರೆ ಕಡೆಗೆ ಸಿಗುತ್ತವೆ ಎಂದರೆ ಸಿಗಬಹುದು. ಘಟನಾ ಸ್ಥಳದ ಭಾವಚಿತ್ರಗಳನ್ನು ತೆಗೆದಿಲ್ಲಾ. ಸದರಿ ಭಾವಚಿತ್ರವನ್ನು ತೆಗೆಯಲು ಯಾವದೇ ತೊಂದರೆ ಇರಲಿಲ್ಲಾ. ಯಾವದೇ ರೀತಿ ದಾಳಿ ಮಾಡಿಲ್ಲಾ, ಪಂಚನಾಮೆ ಮಾಡಿಲ್ಲಾ ಹಾಗೂ ಮುದ್ದೆ ಮಾಲುಗಳು ಈ ಪ್ರಕರಣಕ್ಕೆ ಸಂಬಂಧಿಸಿಲ್ಲಾ ಎಂದರೆ ಸರಿಯಲ್ಲಾ. ಅಂಕಿ-ಸಂಖ್ಯೆಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಚಾಸಾ-1 ರವರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**